# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 314/2015

ಸಿಡಬ್ಲ್ಯೂ-5 ಪಿಡಬ್ಲ್ಯೂ-3

| | |
|---|---|
| ಹೆಸರುಃ | ರಾಮಲಿಂಗ ಕೆ. |
| ತಂದೆ ಹೆಸರುಃ | ಕೋಬಣ್ಣ ಚನ್ನಗೊಂಡ |
| ವಯಸ್ಸುಃ | 58 ವರ್ಷ |
| ಉದ್ಯೋಗಃ | ಎಜ್ಯುಕೇಷನ ಆಫೀಸರ್ |
| ವಾಸ ಸ್ಥಳಃ | ಕಲಬುರಗಿ |

ದಿನಾಂಕ 28-02-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಸನ್ 2011 ರಿಂದ 2014 ರವರೆಗೆ ನಾನು ಸೇಡಂನ ಶಿಕ್ಷಣ ಇಲಾಖೆಯಲ್ಲಿ ಸಮನ್ವಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 15.01.2013 ರಂದು ನಾನು ಬಿಲಕಲ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನನ್ನ ಸಹ ಸಿಬ್ಬಂದಿಯವರಾದ ನಿಂಗಣ್ಣ ಸಣ್ಣಕ್ಕಿ ಇವರೊಂದಿಗೆ ಖುದ್ದಾಗಿ ಸಂದರ್ಶನ ಮಾಡಿರುತ್ತೇನೆ. ಸಂದರ್ಶನ ಮಾಡುವಾಗ ಶಾಲೆಯ ಮುಖ್ಯ ಗುರುಗಳಾದ ರಾಜು ಟಿ. ಮತ್ತು ಶಾಲಾ ಸಿಬ್ಬಂದಿಯವರು ಹಾಜರು ಇದ್ದರು. ಸದರಿ ಸರಕಾರಿ ಶಾಲೆಗೆ ಎರಡು ಹೊಸ ಕೊಠಡಿಗಳ ನಿರ್ಮಾಣ ಮತ್ತು ಡಿವೆಲ್ ಡೆಸ್ಕ ಶಾಲಾ ಕೊಠಡಿ ನಿರ್ವಹಣೆಗಾಗಿ 11 ಲಕ್ಷಕ್ಕಿಂತ ಹೆಚ್ಚು ಅನುದಾನ ಮಂಜೂರು ಆಗಿತ್ತು. ನಾನು ಹೋಗಿ ಪರಿಶೀಲಿಸಿದಾಗ 4 ಲಕ್ಷ 42 ಸಾವಿರ ಹಣವನ್ನು ಶಾಲಾ ಕಟ್ಟಡದ ಉದ್ದೇಶಕ್ಕಾಗಿ ಮುಖ್ಯ ಶಿಕ್ಷಕ ಸತೀಶಕುಮಾರ ಮತ್ತು ಎಸ್.ಡಿ.ಎಮ್.ಸಿ. ಅಧ್ಯಕ್ಷ ವೆಂಕಟಪ್ಪ ಗೊಲ್ಲಾ ಇವರು ಖರ್ಚು ಮಾಡಿದ್ದರು ಕೊಠಡಿ ನೋಡಿದಾಗ ಸದರಿ ಕಟ್ಟಡವನ್ನು ಅಪೂರ್ಣವಾಗಿ ಮಾಡಿದ್ದು ನನಗೆ ಕಂಡುಬಂತು. ಬಾಕಿ ಇನ್ನೂಳಿದ ಹಣ 6 ಲಕ್ಷ 7 ಸಾವಿರ ಚಿಲ್ಲರೆ ರಕ್ಕಮು ಹಣವನ್ನು ಎಸ್,ಡಿ.ಎಮ್.ಸಿ. ಅಧ್ಯಕ್ಷ ಮತ್ತು ಶಾಲಾ ಮುಖ್ಯ ಶಿಕ್ಷಕ ಸತೀಶಕುಮಾರ ದುರುಪಯೋಗಪಡಿಸಿಕೊಂಡಿದ್ದರು. ಸದರಿ ವಿಷಯನ್ನು ನಾನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇಡಂ ಇವರಿಗೆ ವರದಿ ಮಾಡಿರುತ್ತೇನೆ . ಘಟನೆಯ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುತ್ತೇನೆ (ಈ ದಿವಸ ಆರೋಪಿ ನಂ.2 ಹಾಜರು ಇರುತ್ತಾರೆ. ಆರೋಪಿ ನಂ.1 ಗೈರು ಹಾಜರಿದ್ದು ಹಾಜರಾತಿ ವಿನಾಯತಿ ಕೋರಿ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ ಹಾಗೂ ಆರೋಪಿ ನಂ.1 ಇವರ ಗುರುತುಪರಿಚಯದ ಕುರಿತು ತಮ್ಮ ಆಕ್ಷೇಪನೆ ಇರುವುದಿಲ್ಲ

ಎಂದು ವಾದ ಮಂಡಿಸಿರುತ್ತಾರೆ). ಆರೋಪಿತರು ರೂ.6 ಲಕ್ಷ 7 ಸಾವಿರ ಚಿಲ್ಲರೆ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿ ತಮ್ಮ ಸ್ವಂತಕ್ಕೆ ಬಳಸಿಕೊಂಡು ದುರುಪಯೋಗಪಡಿಸಿಕೊಂಡು ಸರಕಾರಕ್ಕೆ ಮೋಸ ಮತ್ತು ವಂಚನೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎ. ಎಸ್. ಕೆ. ಆರೋಪಿ ಪರ ವಕೀಲರಿಂದ**

**(ಶ್ರೀ ಎ.ಎಸ್.ಕೆ. ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಾಕ್ಷಿ ಸಾರ್ವಜನಿಕ ನೌಕರನಾಗಿದ್ದು, ಗುಲಬರ್ಗಾದಿಂದ ಸಾಕ್ಷ್ಯ ನುಡಿಯಲು ಬಂದಿರುವುದರಿಂದ ಪಾಟೀ ಸವಾಲು ಮುಂದೂಡಲು ಯೋಗ್ಯ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬಂದಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

* SYH*

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 314/2015

ಸಿಡಬ್ಲ್ಯೂ-4 ಪಿಡಬ್ಲ್ಯೂ-4

| | |
|---|---|
| ಹೆಸರುಃ | ವೀರಣಗೌಡ |
| ತಂದೆ ಹೆಸರುಃ | ಶಂಕರಗೌಡ ಪೊಲೀಸಪಾಟೀಲ |
| ವಯಸ್ಸುಃ | 44 ವರ್ಷ |
| ಉದ್ಯೋಗಃ | ಶಿಕ್ಷಕರು |
| ವಾಸ ಸ್ಥಳಃ | ಮಲ್ಕಾಪಲ್ಲಿ |

ದಿನಾಂಕ 28-02-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2013 ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ದುಗನೂರು ಸಿ.ಆರ್.ಪಿ. ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ಬಿಲಕಲ ಗ್ರಾಮದ ಸರಕಾರಿ ಹಿರಿಯ ಪ್ರಾಥಿಮಿಕ ಶಾಲೆ ನಮ್ಮ ದೂಗನೂರು ಸಿ.ಆರ್.ಪಿ. ವ್ಯಾಪ್ತಿಯಲ್ಲಿ ಬರುತ್ತದೆ. ನಾನು ದಿನಾಂಕ 31.12.2012 ರಂದು ಹಾಗೂ 09.01.2013 ರಂದು ಸದರಿ ಶಾಲೆಗೆ ಸಂದರ್ಶನದ ನಿಮಿತ್ಯ ಭೇಟಿ ಕೊಟ್ಟಿರುತ್ತೇನೆ. ನಾನು ಭೇಟಿ ಕೊಟ್ಟಾಗ ಮುಖ್ಯಗುರುಗಳಾದ ರಾಜು ಟಿ. ಹಾಗೂ ಶಾಲಾ ಸಿಬ್ಬಂದಿಯವರು ಹಾಜರು ಇದ್ದರು. ಸರಕಾರದ ಕಾಮಗಾರಿಗಳನ್ನು ಡ್ಯೂಯಲ್ ಡೆಸ್ಕ ವಿಷಯಗಳ ಪರಿಶೀಲನೆಗಾಗಿ ಭೇಟಿ ಕೊಟ್ಟಿದ್ದು ಇತ್ತು. ನಾನು ಭೇಟಿಕೊಟ್ಟಾಗ ಡ್ಯೂಯಲ್ ಡೆಸ್ಕ ಇರಲಿಲ್ಲ ಹಾಗೂ ಕೊಠಡಿ ಅಪೂರ್ಣವಾಗಿದ್ದವು. ಶಾಲೆಗೆ ಕೋಣೆಗಳ ನಿರ್ವಹಣೆಗಾಗಿ 11 ಲಕ್ಷ ಮತ್ತು ಚಿಲ್ಲರೆ ಹಣ ಮಂಜೂರು ಆಗಿತ್ತು. ಹಾಗೇ ಮಂಜೂರಾದ ರಕಮಿನಪೈಕಿ 4 ಲಕ್ಷ 7 ಸಾವಿರ ಮತ್ತು ಚಿಲ್ಲರೆ ಹಣ ಬಳಕೆಯಾಗಿದ್ದು ಇತ್ತು. ರೂ. 6,07,846/- ರೂಪಾಯಿ ಹಣ ದುರೂಪಯೋಗ ಆಗಿದ್ದು ಕಂಡುಬಂತು. ಸದರಿ ಹಣವನ್ನು ಮುಖ್ಯ ಶಿಕ್ಷಕರಾದ ಸತೀಶಕುಮಾರ ಹಾಗೂ ಎಸ್.ಡಿ.ಎಮ.ಸಿ. ಅಧ್ಯಕ್ಷರು ದುರ್ಬಳಕೆ ಮಾಡಿದ್ದರು. ಸರಕಾರ 11 ಲಕ್ಷ ಹಣವನ್ನು ಮುಖ್ಯ ಶಿಕ್ಷಕರ ಮತ್ತು ಎಸ್.ಡಿ.ಎಮ್.ಸಿ. ಅಧ್ಯಕ್ಷರ ಜಂಟಿ ಖಾತೆಗೆ ಹಾಕಿದ್ದು ಇತ್ತು. ಸದರಿಯವರು ಸರಕಾರದ ಹಣವನ್ನು ಡ್ರಾ ಮಾಡಿಕೊಂಡು ಸರಕಾರಕ್ಕೆ ಮೋಸ ಮಾಡಿ ದುರ್ಬಳಕೆ ಮಾಡಿದ್ದು ಕಂಡುಬಂದಿದ್ದು ಇರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸುತ್ತೇನೆ. ಅವರು ಎಸ್.ಡಿ.ಎಮ್.ಸಿ. ಅಧ್ಯಕ್ಷರು ಇದ್ದರು. ಸತೀಶಕುಮಾರ ಇವರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. (ಈ ದಿವಸ ಆರೋಪಿ ನಂ.2 ಹಾಜರು ಇರುತ್ತಾರೆ. ಆರೋಪಿ ನಂ.1 ಗೈರು ಹಾಜರಿದ್ದು ಹಾಜರಾತಿ ವಿನಾಯತಿ ಕೋರಿ

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ ಹಾಗೂ ಆರೋಪಿ ನಂ.1 ಇವರ ಗುರುತುಪರಿಚಯದ ಕುರಿತು ತಮ್ಮ ಆಕ್ಷೇಪನೆ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ). ಆರೋಪಿತರು ಹಣವನ್ನು ದುರ್ಬಳಕೆ ಮಾಡಿಕೊಂಡು ಸರಕಾರಕ್ಕೆ ಮೋಸ ಮತ್ತು ವಂಚನೆ ಮಾಡಿರುತ್ತಾರೆ. ಈ ಕುರಿತು ನಾನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ನೀಡಿರುತ್ತೇನೆ. ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಎ.ಎಸ್.ಕೆ ಆರೋಪಿ ಪರ ವಕೀಲರಿಂದ**

**(ಶ್ರೀ ಎ.ಎಸ್.ಕೆ. ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಾಕ್ಷಿ ಸಾರ್ವಜನಿಕ ನೌಕರನಾಗಿದ್ದು, ಹನುಮನಹಳ್ಳಿಯಿಂದ ಸಾಕ್ಷ್ಯ ನುಡಿಯಲು ಬಂದಿರುವುದರಿಂದ ಪಾಟೀ ಸವಾಲು ಮುಂದೂಡಲು ಯೋಗ್ಯ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡುಬಂದಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ.ದ.ನ್ಯಾದಂ.ಸೇಡಂ.

* SYH*